**ದಿನಾಂಕಃ 11/08/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ. ಎಸ್ ಎಂ ಪಿ ವಕೀಲರಿಂದಃ**

1. ನಮ್ಮ ನಿಲವಾಡಿ ಗ್ರಾಮದ ಕಾಡು ನಾಯಕರವರನ್ನು ನಾನು ನೋಡಿಲ್ಲ. ಅದೇ ರೀತಿ ಸೂರಮ್ಮ ರವರನ್ನು ನೋಡಿಲ್ಲ. ಕಾಡು ನಾಯಕ ಮತ್ತು ಸೂರಮ್ಮ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಾನು ಕೆ ಸಣ್ಣಪ್ಪ ನಾಯಕ ಮತ್ತು ಅವರ ಹೆಂಡತಿ ಪುಟ್ಟಮ್ಮ ರವರನ್ನು ನೋಡಿಲ್ಲ. ಕೆ ಸಣ್ಣಪ್ಪ ನಾಯಕ ಮತ್ತು ಅವರ ಹೆಂಡತಿ ಪುಟ್ಟಮ್ಮರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಿಲವಾಡಿ ಗ್ರಾಮದ ಹನುಮಮ್ಮ ರವರನ್ನು ನೋಡಿಲ್ಲ ಮತ್ತು ಅವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ.

2. ಈ ದಾವೆಯನ್ನು ನಿಂಗಪ್ಪ ನಾಯಕ ಮತ್ತು ಮಲ್ಲಪ್ಪನಾಯಕ ರವರ ವಿರುದ್ಧ ಹೂಡಿದ್ದಾರೆ. ಈ ದಾವೆಯನ್ನು ಯಾರೋ ಅವರ ಕಡೆಯವರು ಹೂಡಿದ್ದಾರೆ, ಆದರೆ ಅವರ ಹೆಸರು ಗೊತ್ತಿಲ್ಲ. ಈ ದಾವೆಯನ್ನು ಆಸ್ತಿ ನಮಗೆ ಬರಬೇಕು ಎಂದು ಹೂಡಿದ್ದಾರೆ, ಆದರೆ ಹೂಡಿದವರನ್ನು ನಾನು ನೋಡಿಲ್ಲ. ಯಾವ ಜಮೀನಿಗೆ ಸಂಬಂಧಿಸಿದಂತೆ ಈ ದಾವೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಊರಿನಲ್ಲಿ ಏನು ನಡೆಯುತ್ತಿದೆಯೋ ಅದನ್ನೇ ಹೇಳಿ ಬರೆಸಿದ್ದೇನೆ. ದಾವೆಯನ್ನು ಹೂಡಿದವರಿಗೂ ಮತ್ತು ಹೂಡಿಸಿಕೊಂಡವರಿಗೂ ಏನು ಸಂಬಂಧ ಎಂದು ಗೊತ್ತಿಲ್ಲ.

3. ದಾವೆಯಲ್ಲಿ ತಿಳಿಸಿರುವ ವಂಶವೃಕ್ಷ ಸರಿ ಇಲ್ಲ. ನನಗೆ ಓದಲು ಬರುವುದಿಲ್ಲ, ಆದ್ದರಿಂದ ಯಾವ ವಂಶ ವೃಕ್ಷವನ್ನು ಬರೆಸಿದ್ದಾರೆಂದು ಗೊತ್ತಿಲ್ಲ. 5 ನೇ ಪ್ರತಿವಾದಿ ಈ ದಿನ ಸಾಕ್ಷಿ ನುಡಿಯಲು ನನ್ನನ್ನು ಕರೆದುಕೊಂಡು ಬಂದಿದ್ದಾರೆ. ಆದ್ದರಿಂದ 5 ನೇ ಪ್ರತಿವಾದಿ ಹೇಳಿಕೊಟ್ಟಂತೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ನನ್ನ ಜೊತೆ ಊರಿನಲ್ಲಿ ಚೆನ್ನಾಗಿದ್ದಾರೆ. ನಾನು 5 ನೇ ಪ್ರತಿವಾದಿ ಹೇಳಿಕೊಟ್ಟಂತೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಕಾಡು ನಾಯಕರವರ ವಂಶವೃಕ್ಷ ಗೊತ್ತಿಲ್ಲ. ಕಾಡು ನಾಯಕರವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ಗೊತ್ತಿಲ್ಲ. ನನಗೆ ಯಾವ ಜಮೀನಿಗೆ ಸಂಬಂಧಿಸಿದಂತೆ ಈ ದಾವೆ ಹೂಡಿದ್ದಾರೆಂದು ಗೊತ್ತಿಲ್ಲದ ಕಾರಣ 5 ನೇ ಪ್ರತಿವಾದಿ ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. 38-40 ವರುಷಗಳ ಹಿಂದೆ ನಮ್ಮ ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದೆವು. ಆಗ ಕಾಡುನಾಯಕರವರ ಸಂಸಾರದಲ್ಲಿ ಯಾವ ವ್ಯವಹಾರಗಳು ಆಗಿವೆ ಎಂದು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾ ಅವರನ್ನು ನೋಡಿಯೇ ಇಲ್ಲ ಎಂದು ನುಡಿಯುತ್ತಾರೆ. ಕಾಡುನಾಯಕ ಮತ್ತು ಸೂರಮ್ಮ ರವರಿಗೆ ಇಬ್ಬರು ಮಕ್ಕಳು, ಅವರ ಹೆಸರು ಮಲ್ಲನಾಯಕ ಮತ್ತು ಕೆ ಸಣ್ಣಪ್ಪ ನಾಯಕ ಎಂದರೆ ಸಾಕ್ಷಿಯು ಮಲ್ಲನಾಯಕ ರವರನ್ನು ನೋಡಿದ್ದೇನೆ, ಕೆ ಸಣ್ಣಪ್ಪ ನಾಯಕನನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ಮಲ್ಲನಾಯಕ ಮರಣಗೊಂಡು ಅಂದಾಜು 40 ವರುಷಗಳು ಕಳೆದಿವೆ. ಮಲ್ಲನಾಯಕ ತೀರಿಕೊಂಡ 3 ವರುಷಗಳ ನಂತರ ಅವರ ಹೆಂಡತಿ ಹನುಮಮ್ಮ ಮರಣಗೊಂಡರು.

5. ದಾವಾ ಸ್ವತ್ತುಗಳು 40 ವರುಷಗಳ ಹಿಂದೆ ಕಾಡುನಾಯಕರವರ ಹೆಸರಿನಲ್ಲಿ ಕಂದಾಯ ದಾಖಲಾತಿಗಳು ಇದ್ದವು ಎಂದರೆ ಸಾಕ್ಷಿಯು ಮಲ್ಲನಾಯಕರವರ ಹೆಸರಿನಲ್ಲಿದ್ದ ದಾಖಲೆಗಳು ಗೊತ್ತು ಎಂದು ನುಡಿಯುತ್ತಾರೆ. ಮಲ್ಲನಾಯಕರವರಿಗೆ ದಾವಾ ಸ್ವತ್ತುಗಳು ಹೇಗೆ ಬಂತು ಎಂದು ತಿಳಿದುಕೊಂಡಿಲ್ಲ. ಕಾಡುನಾಯಕರವರು ಜೀವಂತ ಇದ್ದಾಗ ದಾವಾ ಸ್ವತ್ತುಗಳ ಖಾತೆ ಅವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತಿಲ್ಲ. ದಾವಾ ಸ್ವತ್ತುಗಳು ಕಾಡುನಾಯಕರವರ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ಮಲ್ಲನಾಯಕರವರಿಗೆ ದಾವಾ ಸ್ವತ್ತುಗಳು ಯಾವ ತಾರೀಖು, ತಿಂಗಳು, ಇಸವಿಯಂದು ಬಂತು ಎಂದುದ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಕಾಡುನಾಯಕರವರ ವಾರಸುದಾರರಿಗೆ ಸೇರತಕ್ಕಂತಹ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮಲ್ಲನಾಯಕರವರಿಗೆ ಮಾತ್ರ ಸೇರಿದಂತಹ ಸ್ವತ್ತುಗಳು ಎಂದು ನುಡಿಯುತ್ತಾರೆ. ಮಲ್ಲನಾಯಕರವರು ಯಾವ ಸ.ನಂ ಜಮೀನುಗಳಲ್ಲಿ ಉಳುಮೆ ಮಾಡುತ್ತಿದ್ದರು ಎಂದು ಗೊತ್ತಿಲ್ಲ.

6. ನಿಲವಾಡಿ ಗ್ರಾಮದ ಊರಿನ ಅಕ್ಕಪಕ್ಕದಲ್ಲಿರುವ ಜಮೀನಿನ ಸ.ನಂ. ಗೊತ್ತಿಲ್ಲ. ಅದರ ಚಕ್ಕುಬಂದಿ ಗೊತ್ತು. ಪಶ್ಚಿಮಕ್ಕೆಃ ಮಂಟಿ, ಪೂರ್ವಕ್ಕೆ ಃ ರಸ್ತೆ, ಉತ್ತರಕ್ಕೆಃ ವೀರಪ್ಪ ರವರ ಜಮೀನು, ದಕ್ಷಿಣಕ್ಕೆಃ ಕರಿಯಣ್ಣರವರ ಜಮೀನು. ಈಗ ಹೇಳಿದ ಜಮೀನಿನ ವಿಸ್ತೀರ್ಣ ಗೊತ್ತಿಲ್ಲ.

7. ನಮ್ಮ ಊರಿನ ವೀರಪ್ಪನಾಯಕರವರ ಮಗ ಚಂದ್ರಪ್ಪನಾಯಕರವರು ಗೊತ್ತಿಲ್ಲ. ಚಂದ್ರಪ್ಪನಾಯಕ ರವರ ವಂಶವೃಕ್ಷ ಗೊತ್ತಿಲ್ಲ. ನಿಲವಾಡಿ ಗ್ರಾಮದಲ್ಲಿ ನಮಗೆ ಸೇರಿದ 2 ಎಕರೆ ಜಮೀನು ಇದೆ. ನಮ್ಮ ಊರಿನಲ್ಲಿ ಕಾಡುನಾಯಕ ಮತ್ತು ಸೂರಮ್ಮ ಎಂಬ ದಂಪತಿಗಳು ಇದದರೆ

ನನಗೆ ಗೊತ್ತಿಲ್ಲ. ಅವರಿಗೆ ಮಲ್ಲನಾಯಕ ಮತ್ತು ಕೆ ಸಣ್ಣಪ್ಪನಾಯಕ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಆದರೆ ಮಲ್ಲನಾಯಕರವರನ್ನು ಮಾತ್ರ ನೋಡಿದ್ದೆ. ಸಣ್ಣಪ್ಪನಾಯಕರವರಿಗೆ ಪುಟ್ಟಮ್ಮ ಎಂಬ ಹೆಂಡತಿ ಇದ್ದರು ಎಂದರೆ ನಾನು ನೋಡಿಲ್ಲ, ಅವರಿಗೆ ಟಿ ಎಸ್ ಮಲ್ಲಪ್ಪ ಎಂಬ ಒಬ್ಬ ಗಂಡು ಮಗ ಮತ್ತು 6 ಜನ ಹೆಣ್ಣು ಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಮಲ್ಲನಾಯಕರವರಿಗೆ ನಿಂಗಪ್ಪನಾಯಕ ಮತ್ತು ಎಂ ಮಲ್ಲಪ್ಪ ಎಂಬ ಇಬ್ಬರು ಮಕ್ಕಳು. ನಿಂಗಪ್ಪನಾಯಕ ತೀರಿಕೊಂಡು 35 ವರುಷಗಳು ಕಳೆದಿರಬಹುದು. ನಿಂಗಪ್ಪನಾಯಕ ರವರ ಹೆಂಡತಿಯ ಹೆಸರು ಶಾಂತಮ್ಮ. ಎಂ ಮಲ್ಲಪ್ಪ ರವರ ಮಕ್ಕಳ ಹೆಸರು ದತ್ತಾತ್ರೇಯ, ಸುಮ, ವೀಣಾ, ನಂದೀಶ. ಈ ದಾವೆಯ ಬಗ್ಗೆ ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ 5 ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**